# ಯಾಣ ಕುರಿತೊಂದು ಪತ್ರ

## ಅ. ಇಲ್ಲಿರುವ ಪದಗಳನ್ನು ಬಳಸಿ ಸೂಕ್ತವಾದುದನ್ನು ಬಿಟ್ಟ ಸ್ಥಳದಲಿ ತುಂಬಿರಿ. (Fill in the blanks)

(ಪದ್ಮನಿ, ರಾಗಿಣಿ ಮತ್ತು ಜೆನಿಫರ್, ಗುಪ್ತ, ರಾಜು, ದಂತ)

೧. ಅದೊಂದು ಭಾನುವಾರ ಎಲ್ಲರೂ ರಾಜುವಿನ ಮನೆಗೆ ಬಂದರು.

೨. 'ಇ ಮೇಲ್' ತೆರೆಯಲು ಗುಪ್ತ ಸಂಕೇತದ ಅಗತ್ಯವಿದೆ.

೩. ವಿಶೇಷ ಪತ್ರ ತಯಾರಿಸಲು ಹೇಳಿದ್ದು ಪದ್ಮಿನಿ ಮೇಡಂ.

೪. ಯಾಣದ ಕುರಿತಾಗಿ ಒಂದು ದಂತ ಕಥೆಯಿದೆ.

೫. ಯಾಣದ ಚಿತ್ರಗಳನ್ನು ಅದರ ವಿವರಗಳನ್ನು ರಾಗಿಣಿ ಮತ್ತು ಜೆನಿಫರ್ ಒದಿದರು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

## ಆ. ಗುಂಪಿಗೆ ಸೇರದ ಪದ ಗುರುತಿಸಿ ಬರೆಯಿರಿ. (Write the odd one out)

೧. ಕಾಗದ, ಪತ್ರ, ದೂರವಾಣಿ, ಓಲೆ

೨. ಹೆಬ್ಬಂಡೆ, ಹಿರಿದು ಬಂಡೆ, ಕಿರಿದು ಬಂಡೆ, ದೊಡ್ಡ ಬಂಡೆ

೩. ಸಂತೋಷ, ದುಃಖ, ಆನಂದ, ಸುಖ

೪. ಸಂಪತ್ತು, ಆಪತ್ತು, ಧನ, ಐಶ್ವರ್ಯ

## ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ. (Answer the following in one sentence)

೧. ರಾಜುವಿನ ಮನೆಗೆ ಯಾರು ಯಾರು ಬಂದರು?

ಉ. ಸಲೀಂ, ರಾಗಿಣಿ, ಜೆನಿಫರ್ ಮತ್ತು ಶಂಕರ್ ರಾಜುವಿನ ಮನೆಗೆ ಬಂದರು.

೨. ಇ-ಅಂಚೆ ಎಂದರೇನು?

ಉ. ಇ ಅಂದರೆ ಎಲೆಕ್ಟ್ರಾನಿಕ್ ಅಂಚೆ.

೩. ಯಾಣದ ಯಾವ ಶಿಖರ ಉಕ್ಕಿನಕೋಟೆಯಂತಿದೆ?

ಉ. ಯಾಣದ ಭೈರವೇಶ್ವರ ಶಿಖರ ಉಕ್ಕಿನಕೋಟೆಯಂತಿದೆ.

೪. ಯಾಣದ ಕಲ್ಲು ಯಾವುದರಿಂದ ಉತ್ಪತ್ತಿಯಾಗಿದೆ?

ಉ. ಯಾಣದ ಕಲ್ಲು ಸುಣ್ಣದ ಕಲ್ಲಿನಿಂದ ಉತ್ಪತ್ತಿಯಾಗಿದೆ.

೫. ಯಾಣದಲ್ಲಿ ಯಾವ ದೇವರ ಉತ್ಸವ ನಡೆಯುತ್ತದೆ?

ಉ. ಯಾಣದಲ್ಲಿ ಭೈರವೇಶ್ವರ ದೇವರ ಉತ್ಸವ ನಡೆಯುತ್ತದೆ.

ಈ. ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.
(Answer the following in two -three sentences)

೧. ಸುಂದರ್ ಗುಪ್ತ ಸಂಕೇತವನ್ನು ರಾಜುವಿಗೆ ಮಾತ್ರ ಏಕೆ ಹೇಳಿದರು?

ಉ. ಗುಪ್ತ ಸಂಕೇತವು ಇನ್ನೊಬ್ಬರಿಗೆ ಗೊತ್ತಾಗಬಾರದು. ಗೊತ್ತಾದರೆ ಯಾರಾದರೂ ಪತ್ರ ಓದಬಹುದು ಮತ್ತು ಬರೆಯಬಹುದು. ಅದು ತಪ್ಪು ಎಂದು ಸುಂದರ್ , ಗುಪ್ತ ಸಂಕೇತವನ್ನು ರಾಜುವಿಗೆ ಮಾತ್ರ ಹೇಳಿದರು.

೨. ಯಾಣದ ಕುರಿತಾಗಿ ಇರುವ ಒಂದು ದಂತಕಥೆಯನ್ನು ಬರೆಯಿರಿ.

ಉ. ಪುರಾಣಕಾಲದಲ್ಲಿ ಯಾಣದಲ್ಲಿ ಭಸ್ಮಾಸುರನೆಂಬ ರಾಕ್ಷಸ ವಾಸವಾಗಿದ್ದನು. ಈತನ ಉಪಟಳ ಸಹಿಸಲು ಸಾಧ್ಯವಾಗದೇ ಶಿವನು ಅವನನ್ನು ಸುಟ್ಟು ಬೂದಿಮಾಡಿದ. ಈ ಬೂದಿಯಿಂದ ದೊಡ್ಡ ಶಿಖರ ಬೆಳೆಯಿತು ಎಂಬುದು ದಂತ ಕಥೆ.

೩. ಯಾವ ದೃಶ್ಯಗಳು ನೋಡುಗರನ್ನು ಚಕಿತಗೊಳಿಸುತ್ತವೆ?

ಉ. ಯಾಣದ ಕಾಡಿನ ಮಧ್ಯೆ ಇರುವ ಮೋಹಿನಿ ಶಿಖರ. ಇದು ೩೦೦ ಅಡಿ ಎತ್ತರವಿದೆ. ಸ್ವಲ್ಪ ಮುಂದೆ, ೩೯೦ ಅಡಿ ಎತ್ತರದ ಭೈರವೇಶ್ವರ ಶಿಖರ ಕಪ್ಪು ಕಲ್ಲಿನ ಉಕ್ಕಿನ ಕೋಟೆಯಂತಿದೆ. ಪ್ರಕೃತಿ ಮಾತೆಯ ಈ ಆಕೃತಿಗಳು ನೋಡುಗರನ್ನು ಚಕಿತಗೊಳಿಸುತ್ತದೆ.

FOR KANNADA

ಉ. ಸಂಧಿ ಬಿಡಿಸಿ, ಸಂಧಿಯನ್ನು ಹೆಸರಿಸಿರಿ. (Split the word and name the Sandhi)

೧. ಭಸ್ಮಾಸುರ = ಭಸ್ಮ + ಅಸುರ (ಸುವರ್ಣಧೀರ್ಘಸಂಧಿ)

೨. ಭೈರವೇಶ್ವರ = ಭೈರವ + ಈಶ್ವರ (ಗುಣಸಂಧಿ)

೩. ಏಕೈಕ = ಏಕ + ಏಕ (ವೃಧ್ಧಿಸಂಧಿ)

೪. ಇತ್ಯಾದಿ = ಇತಿ + ಆದಿ (ಯಣ್ ಸಂಧಿ)

೫. ಸೂರ್ಯೋದಯ = ಸೂರ್ಯ + ಉದಯ (ಗುಣ ಸಂಧಿ)

ಊ. ನಿಮ್ಮೂರಿನ ರಸ್ತೆಗೆ ಬೀದಿ ದೀಪಗಳನ್ನು ಅಳವಡಿಸುವಂತೆ ಕೋರಿ ಸಂಭಂಧಿಸಿದ ಕಛೇರಿಗೆ ಒಂದು ಪತ್ರ ಬರೆಯಿರಿ. (Write a letter to the concerned office requesting them to install street lights on the road in your village)

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

ಇಂದ,

ರಮೇಶ ನಾಯಕ,

೩ನೇ ಮುಖ್ಯ ರಸ್ತೆ, ೧ನೇ ಅಡ್ಡ ರಸ್ತೆ,

ಗಿರಿನಗರ,

ಬೆಂಗಳೂರು – ೫೬೦೦೭೮

ಇವರಿಗೆ,

ನಿರ್ದೇಶಕರು,

ಮಹಾನಗರ ಪಾಲಿಕೆ,

ಗಿರಿನಗರ,

ಬೆಂಗಳೂರು - ೫೬೦೦೭೮

ಮಾನ್ಯರೇ,

ವಿಷಯ: ಬೀದಿ ದೀಪಗಳನ್ನು ಅಳವಡಿಸುವಂತೆ ಕೋರಿ

ಗಿರಿನಗರದ ೩ನೇ ಮುಖ್ಯ ರಸ್ತೆ, ೧ನೇ ಅಡ್ಡ ರಸ್ತೆಯಲ್ಲಿ ಹತ್ತು ಬೀದಿ ದೀಪಗಳ ಕಂವಗಳಿವೆ. ಆದರೆ ಯಾವುದಕ್ಕೂ ದೀಪವೂ ಇಲ್ಲ. ರಾತ್ರಿ ಜನ ಓಡಾಡಲು ತುಂಬ ಕಷ್ಟವಾಗಿದೆ. ರಸ್ತೆ ಕೂಡ ಸರಿಯಿಲ್ಲ. ದಯವಿಟ್ಟು ತಕ್ಷಣ ಬೀದಿ ದೀಪಗಳನ್ನು ಅಳವಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ವಂದನಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ,

(ರಮೇಶ ನಾಯಕ)

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ